# ಆತ್ಮಸಾಕ್ಷಾತ್ಕಾರದ ಸಾಧನೆಗೆ ಹಾದಿ

ಪ್ರಭುಪ್ರಸಾದ್ ಎನ್.ಜಿ.

ಉಪನಿಷತ್ತುಗಳು ಮತ್ತು ಭಗವದ್ಗೀತೆಗಳಲ್ಲಿ ಹೇಳಿರುವ ಸಾಧನಾ ಮಾರ್ಗದ ಗುರಿ ಆತ್ಮಸಾಕ್ಷಾತ್ಕಾರ; ನಮ್ಮಲ್ಲಿರುವ ದಿವ್ಯತೆಯ ಅರಿವು. ಈ ಸಾಧನೆಯ ಪಥದಲ್ಲಿರಬೇಕಾದ ನಿಷ್ಠೆಯ ಬಗ್ಗೆ ಶ್ರೀ ಪ್ರಭು ಪ್ರಸಾದ್ ಅವರು, ಈ ಲೇಖನದಲ್ಲಿ, ಸರಳವಾಗಿ ತಿಳಿಸಿಹೇಳಿದ್ದಾರೆ. ಇವರು ಶೃಂಗೇರಿಯವರು; ಇಂಜಿನಿಯರಿಂಗ್ ಪದವೀಧರರು.

ಪ್ರತಿಯೊಬ್ಬ ಮಾನವನಿಗೂ ಒಂದಲ್ಲ ಒಂದು ಸಂದರ್ಭದಲ್ಲಿ "ನಾನು ಯಾರು?" ಎಂಬ ಪ್ರಶ್ನೆ ಎದುರಾಗಿರುತ್ತದೆ. ಆದರೆ ಸಾಮಾನ್ಯ ಜನರು ಇದನ್ನು ನಿರ್ಲಕ್ಷಿಸಿ ತಮ್ಮ ದೈನಂದಿನ ವ್ಯವಹಾರಗಳಲ್ಲಿ ಮುಳುಗಿಬಿಡುತ್ತಾರೆ. ಎಲ್ಲೋ ಒಬ್ಬೊಬ್ಬ ಸಾಧಕರು ಈ ಪ್ರಶ್ನೆಗೆ ಉತ್ತರ ತಿಳಿಯಲು ತಮ್ಮ ಜೀವನವನ್ನೇ ಮುಡಿಪಾಗಿಟ್ಟು ಯಶಸ್ವಿಯಾಗುತ್ತಾರೆ. ಬಹುತೇಕ ಜನ ಈ ಶರೀರವೇ 'ನಾನು' ಎಂಬ ಭಾವನೆಯನ್ನು ಹೊಂದಿರುತ್ತಾರೆ. ಅದರೊಳಗಿರುವ, ಎಲ್ಲವನ್ನೂ ನಿಯಂತ್ರಿಸುತ್ತಿರುವ ಜೀವವು ಅದನ್ನು ತ್ಯಜಿಸಿದಾಗ ಈ ಶರೀರವು ನಿಷ್ಕ್ರಿಯವಾಗುತ್ತದೆ, ಅಲ್ಲವೆ? ಆದ್ದರಿಂದ, ಕೇವಲ ಈ ಶರೀರ 'ನಾನು' ಆಗಿರಲು ಸಾಧ್ಯವಿಲ್ಲ. ಹೀಗೆಯೇ ಅನೇಕ ಮಹರ್ಷಿಗಳು ಹಾಗೂ ಮಹಾಪುರುಷರು ತಮ್ಮೊಳಗೆ ಇಂಥ ವಿಚಾರಗಳನ್ನು ಮಥಿಸುತ್ತ, ಈ ದೇಹವೇ 'ನಾನು' ಅಲ್ಲವೆಂದೂ, ಅದಕ್ಕೆ ಮೀರಿದ ಒಂದು ಶಕ್ತಿ ನಮ್ಮೊಳಗೆ ಇದೆಯೆಂದೂ, ಹಾಗೂ ಅದು ಅಜರಾಮರವೆಂದೂ ಕಂಡುಕೊಂಡರು. ಈ ಅವಿನಾಶಿಯಾದ ಚೈತನ್ಯಸ್ವರೂಪವನ್ನೇ 'ಆತ್ಮ' ಎಂದು ಕರೆಯಲಾಗಿದೆ.

ಶ್ರೀಮದ್ಭಗವದ್ಗೀತೆಯಲ್ಲಿ ಆತ್ಮನ ಬಗ್ಗೆ ಸರಳವಾಗಿ ಆದರೆ ಅಷ್ಟೇ ಸಮರ್ಪಕವಾಗಿ ವರ್ಣಿಸಲಾಗಿದೆ. ಅದರ ಪ್ರಕಾರ ಆತ್ಮನು ನಾಶರಹಿತನೂ ನಾಮಲಿಂಗಗಳನ್ನು ಮೀರಿದವನೂ, ನಿತ್ಯಸ್ವರೂಪನೂ ಆಗಿದ್ದು ಅವನು ಆಶ್ರಯಿಸುವ ಶರೀರಗಳು ಮಾತ್ರ ಹೆಸರು, ಲಿಂಗ ಮತ್ತು ರೂಪಗಳನ್ನು ಹೊಂದುತ್ತವೆ. ದೇಹದಲ್ಲಿರುವ ಆತ್ಮನು ಬಾಲ್ಯದಿಂದ ಯೌವನಕ್ಕೆ, ಮುಪ್ಪಿಗೆ ಒಂದೇ ಸಮನೆ ಸಾಗುವಂತೆ, ಸಾವಿನ ನಂತರ ಮತ್ತೊಂದು ದೇಹಕ್ಕೆ ಸಾಗುತ್ತಾನೆ. ಧೀರರು ಈ ಶರೀರದ ನಾಶದಿಂದ ಭ್ರಾಂತಿಗೊಳ್ಳುವುದಿಲ್ಲ. ಇದರ ಬಗ್ಗೆ ಗೀತೆಯಲ್ಲಿ (೨.೨೨) ಹೀಗೆ ಹೇಳಲಾಗಿದೆ:

ವಾಸಾಂಸಿ ಜೀರ್ಣಾನಿ ಯಥಾ ವಿಹಾಯ
ನವಾನಿ ಗೃಹ್ಣಾತಿ ನರೋಽಪರಾಣಿ ।
ತಥಾ ಶರೀರಾಣಿ ವಿಹಾಯ ಜೀರ್ಣಾನ್ಯ-
ನ್ಯಾನಿ ಸಂಯಾತಿ ನವಾನಿ ದೇಹೀ ॥

ಅರ್ಥಾತ್, ವ್ಯಕ್ತಿಯೊಬ್ಬನು ಹೇಗೆ ತನ್ನ ಹಳೆಯ ಬಟ್ಟೆಗಳನ್ನು ತ್ಯಜಿಸಿ, ಹೊಸವನ್ನು ಧರಿಸಿಕೊಳ್ಳುತ್ತಾನೆಯೋ, ಹಾಗೆಯೇ ಆತ್ಮನು ಜೀರ್ಣವಾದ ಶರೀರವನ್ನು ಬಿಟ್ಟು ಹೊಸ ಶರೀರವನ್ನು ಹೊಂದುತ್ತಾನೆ. ಈ ಶ್ಲೋಕದಲ್ಲಿ ಭಗವಂತನು ದೇಹದ ಅವಸಾನವು ಒಂದು ಸ್ವಾಭಾವಿಕ ಪ್ರಕ್ರಿಯೆಯೆಂದೂ, ಅದಕ್ಕಾಗಿ ಶೋಕಪಡಬೇಕಾದ ಅಗತ್ಯವಿಲ್ಲವೆಂದೂ ತಿಳಿಸಿದ್ದಾನೆ.

ಈ ಪರಮ ಸತ್ಯವನ್ನು ತಿಳಿದು ಸಾಧಕನು ಆತ್ಮಸಾಕ್ಷಾತ್ಕಾರದತ್ತ ಪಯಣ ನಡೆಸಬೇಕು. ಆಧ್ಯಾತ್ಮಿಕವಾಗಿ ವಿಕಾಸ ಹೊಂದುತ್ತ ವ್ಯಕ್ತಿಯು ತನ್ನೊಳಗೇ ಇರುವ ಪರಿಪೂರ್ಣತೆಯನ್ನು ಅನುಭವಕ್ಕೆ ತಂದುಕೊಳ್ಳಲು ಸಾಧನೆಗೆ ಮುಂದಾಗಬೇಕು.

ಇಲ್ಲಿ ಒಂದು ಸಂದೇಹ ಉದ್ಭವಿಸಬಹುದು. ಅನೇಕ ಜನರು ತಮ್ಮ ಬಾಲ್ಯ, ಯೌವನಾವಸ್ಥೆಯಲ್ಲಿಯೇ ಅಪಘಾತವೇ ಮೊದಲಾದ ಕಾರಣಗಳಿಂದ ಮರಣವನ್ನಪ್ಪುತ್ತಾರೆ. ಅವರ ಶರೀರವು ಮೊದಲೇ ಹೇಗೆ ಜೀರ್ಣವಾಗಿರುತ್ತದೆ? ಇದಕ್ಕೆ ಊಹಿಸಬಹುದಾದ ಉತ್ತರವೆಂದರೆ, ಅವರ ಜನ್ಮಾಂತರ ಕರ್ಮಗಳಿಗನುಸಾರವಾಗಿ ಅವರ ಆಯುಷ್ಯವು ನಿರ್ಧರಿಸಲ್ಪಟ್ಟಿರುತ್ತದೆ. ಅದರಂತೆ ಅವರ ಮರಣದ ಕಾಲದಲ್ಲಿ ಆ ಲೌಕಿಕ ಶರೀರದ ಜೀವಿತಾವಧಿ ಪೂರ್ಣಗೊಂಡು, ಆತ್ಮನು ಅದನ್ನು ತ್ಯಜಿಸುತ್ತಾನೆ. ಮುಂದೆ ಮತ್ತೊಂದು ದೇಹದ ಮೂಲಕ ತನ್ನ ಕರ್ಮಗಳನ್ನು ಪೂರೈಸಲು ಜನ್ಮ ತಳೆಯುತ್ತಾನೆ.

ಮಾನವನ ಜೀವನದ ಗುರಿಯೇ ತನ್ನ ಮೂಲ ಸ್ವರೂಪವನ್ನು ಅರಿಯುವುದಾಗಿದೆ. ಈ ಹಾದಿಯು ದುರ್ಗಮವಾಗಿದ್ದು ಕಠಿಣವಾದ ಸಾಧನೆಯನ್ನು ಬಯಸುತ್ತದೆ. ಕಾಮ, ಕ್ರೋಧಾದಿ ಅರಿಷಡ್ವರ್ಗಗಳ ನಿರ್ಮೂಲನೆಯಿಂದ ನಮ್ಮಲ್ಲಿ ಮನಶ್ಶುದ್ಧಿ ಉಂಟಾಗುತ್ತದೆ. ಇಂಥ ಶುದ್ಧೀಕರಣದಿಂದ ವಿವೇಕಯುತವಾದ ಆನಂದಮಯ ಜೀವನ ನಮ್ಮದಾಗಿ, ಉನ್ನತವಾದ ಗುರಿಯೆಡೆಗೆ ನಮ್ಮ ಗಮನ ಹರಿಯುವುದರಲ್ಲಿ ಸಂದೇಹವಿಲ್ಲ. ನಮ್ಮ ಸಂಸ್ಕೃತಿಯು ಯಾವುದೇ ವ್ಯಕ್ತಿಯನ್ನು 'ಪಾಪಾತ್ಮ'ನೆಂದು ಜರಿಯುವುದಿಲ್ಲ; ಬದಲಾಗಿ ಎಲ್ಲರನ್ನೂ 'ಅಮೃತಪುತ್ರ'ರೆಂದೇ ಕರೆಯುತ್ತದೆ. ಹಾಗಾಗಿ, ಪ್ರತಿಯೊಬ್ಬರಿಗೂ ಆತ್ಮತತ್ತ್ವ

ವನ್ನು ತಿಳಿಯುವ ಅಧಿಕಾರವಿದೆ. ಆದರೆ ನಮ್ಮನ್ನು ಗುಣತ್ರಯಗಳಿಂದ ವಿಚಲಿತರಾಗುವಂತೆ ಮಾಡಲು ತಮೋಗುಣದ ಅಜ್ಞಾನ ಅಥವಾ 'ಮಾಯೆ'ಯೆಂಬ ಮುಸುಕು ನಮ್ಮ ಸ್ವಾನುಭವ ಆವರಿಸಿಕೊಂಡಿದೆ. ಜಗತ್ತಿನಲ್ಲಿ ನಡೆಯುತ್ತಿರುವ ಅನರ್ಥಗಳಿಗೆಲ್ಲಾ ಸತ್ಯದಿಂದ ವಿಚಲಿತಗೊಳಿಸುವ ಸ್ವಾರ್ಥವೇ ಕಾರಣವಾಗಿದೆ. ಮಾಯೆಯ ಪ್ರಭಾವದಿಂದಲೇ ದರ್ಪ, ಕ್ರೋಧ, ಮೋಹ ಇತ್ಯಾದಿ ದುರ್ಗುಣಗಳು ಮನುಷ್ಯನ ಮನಸ್ಸಿನಲ್ಲಿ ನೆಲೆಗೊಂಡಿವೆ. ಇವನ್ನು ನಿವಾರಿಸದ ಹೊರತು ನಮ್ಮನ್ನು ನಾವು ಅರಿಯುವುದು ಕನಸಿನ ಮಾತೇ ಸರಿ! ಇದಕ್ಕೆ ಸ್ವಪ್ರಯತ್ನದ ಜೊತೆಗೆ ಆ ಮಹಾಶಕ್ತಿಯ ಕೃಪೆಯೂ ಅತ್ಯಗತ್ಯವಾಗಿದೆ. ದೇವಿಯು ಜೀವಿಯನ್ನು ಮೋಹಪಾಶದಿಂದ ಬಿಡಿಸಬಲ್ಲಳು, ಅವಳಲ್ಲಿ ವಿದ್ಯೆಯ ಬೆಳಕಿದೆ ಎಂದು ಶ್ರೀರಾಮಕೃಷ್ಣರು ಹೇಳುತ್ತಿದ್ದರು. ಈಶಾವಾಸ್ಯೋಪನಿಷತ್‌ನಲ್ಲಿ ಮಂತ್ರದ್ರಷ್ಟಾರನಾದ ಮಹರ್ಷಿ ಹೀಗೆ ಪ್ರಾರ್ಥಿಸುತ್ತಾನೆ:

ಹಿರಣ್ಮಯೇನ ಪಾತ್ರೇಣ ಸತ್ಯಸ್ಯಾಪಿಹಿತಂ ಮುಖಮ್ ।
ತತ್ತ್ವಂ ಪೂಷನ್ನಪಾವೃಣು ಸತ್ಯಧರ್ಮಾಯ ದೃಷ್ಟಯೇ ॥ (೧೫)

**"ಹೇ ಪೂಷನ್, ಸತ್ಯದ ಮುಖವು ಚಿನ್ನದ ಪಾತ್ರೆಯಿಂದ ಮುಚ್ಚಲ್ಪಟ್ಟಿದೆ. ಸತ್ಯಧರ್ಮನಾದ ನಾನು ಅದನ್ನು ನೋಡಬೇಕಾಗಿರುವುದರಿಂದ ಆ ತೆರೆಯನ್ನು ತೆಗೆದುಬಿಡು."** ಪೂಷನ್ ಎಂದರೆ ಸೂರ್ಯ. ಈ ಪದವು ಸರ್ವಾಂತರ್ಯಾಮಿಯಾದ, ಕಾಲಾತೀತವಾದ ಪರಬ್ರಹ್ಮನನ್ನು ಪ್ರತಿನಿಧಿಸುತ್ತಿದೆ. ಮಹತ್ತರವಾದ, ಶಾಶ್ವತವಾದ ಸತ್ಯವನ್ನು ಮರೆಮಾಡಲು, ಅದನ್ನು ತಾತ್ಕಾಲಿಕವಾದ ಆದರೆ ಆಕರ್ಷಕವಾದ ಮಾಯೆಯಿಂದ ಮುಚ್ಚಲಾಗಿದೆ. ಅದನ್ನು ನಿವಾರಿಸಲು ಸಾಧನೆಯ ಜೊತೆಗೆ ಭಗವಂತನ ಅನುಗ್ರಹವೂ ಅನಿವಾರ್ಯ ಎಂಬ ತತ್ತ್ವವು ಈ ಮಂತ್ರದಲ್ಲಿ ಧ್ವನಿತವಾಗಿದೆ.

ಈ ಆತ್ಮತತ್ತ್ವವನ್ನು ಕೇವಲ ನಮ್ಮ ಮೇಧಾಶಕ್ತಿಯಿಂದಲೇ ತಿಳಿದುಕೊಳ್ಳುತ್ತೇವೆ ಎಂದರೆ ಅದು ಮೂರ್ಖತನವಾದೀತು. ಅದಕ್ಕೆ ಭಗವಂತನ, ಅಂತರಾತ್ಮನ ಕೃಪೆಯೂ ಸಹಾ ಅತ್ಯಗತ್ಯ. ಅದಿಲ್ಲದೆ ಎಂಥ ಸಾಧನೆಯೂ ಫಲ ನೀಡಲಾರದು. ಆದ್ದರಿಂದ ಅನನ್ಯ ಶರಣಾಗತಿಯ (ಪ್ರಪತ್ತಿಯ) ಮನೋಭಾವದಿಂದ ಆತ್ಮನೆಡೆಗೆ ಮನಸ್ಸನ್ನು ಕೇಂದ್ರೀಕರಿಸಬೇಕು. ಈ ವಿಷಯವಾಗಿ 'ಕಠೋಪನಿಷತ್'ನಲ್ಲಿ ಯಮನು ನಚಿಕೇತನಿಗೆ ಹೀಗೆ ಹೇಳುತ್ತಾನೆ:

ನಾಯಮಾತ್ಮಾ ಪ್ರವಚನೇನ ಲಭ್ಯೋ
ನ ಮೇಧಯಾ ನ ಬಹುನಾ ಶ್ರುತೇನ ।
ಯಮೇವೈಷ ವೃಣುತೇ ತೇನ ಲಭ್ಯ–
ಸ್ತಸ್ಯೈಷ ಆತ್ಮಾ ವಿವೃಣುತೇ ತನೂಂ ಸ್ವಾಮ್ ॥ (೧.೨.೨೩)

**"ಈ ಆತ್ಮನು ಪ್ರವಚನದಿಂದ ಸಿಗುವುದಿಲ್ಲ. (ಹಾಗೆಯೇ) ಬುದ್ಧಿಶಕ್ತಿಯಿಂದಾಗಲೀ, ಬರಿ ಕೇಳುವುದರಿಂದಾಗಲೀ ಲಭಿಸುವುದಿಲ್ಲ. ಯಾರು ಇದನ್ನು ಬಯಸುತ್ತಾನೋ ಅವನಿಗೆ ಮಾತ್ರ ಇದು ದೊರೆಯುತ್ತದೆ. ಅವನಿಗೆ ಈ ಆತ್ಮನು ತನ್ನ ಇರವನ್ನು, ಅಸ್ತಿತ್ವವನ್ನು ತೋರಿಸುತ್ತಾನೆ."**

ಶ್ರೀರಾಮಕೃಷ್ಣರು ಹೇಳಿದಂತೆ ಕಾಶಿಗೆ ಹೋಗುವ ಮಾರ್ಗವನ್ನು ತಿಳಿದ ಮಾತ್ರಕ್ಕೆ ಕಾಶಿಗೆ ಹೋದಂತಾಗುವುದಿಲ್ಲ; ಬದಲಾಗಿ ಅದೇ ಮಾರ್ಗದಲ್ಲಿ ಪಯಣಿಸಿದಾಗ ಮಾತ್ರ ಅಲ್ಲಿಗೆ ತಲುಪಲು ನಮಗೆ ಸಾಧ್ಯವಾಗುತ್ತದೆ. ಹಾಗೆಯೇ ಸಾಧನಶೀಲರಾದಾಗ ಮಾತ್ರ ನಮ್ಮೊಳಗಿನ 'ನಾನು'ಎಂಬ ತತ್ತ್ವವನ್ನು ತಿಳಿಯಲು ಸಾಧ್ಯ. ಇದಕ್ಕಾಗಿ ಧ್ಯಾನ ಮಾಡಬೇಕು. ಅದೇ ದಾರಿಯಲ್ಲಿ ಮುಂದೆ ಮುಂದೆ ಸಾಗಿದಂತೆಲ್ಲಾ ಆಧ್ಯಾತ್ಮಿಕ ಅನುಭವಗಳುಂಟಾಗಿ ಮುನ್ನಡೆಯುವ ಆಸಕ್ತಿ, ಸಾಹಸ ಪ್ರವೃತ್ತಿಗಳು ಹುಟ್ಟುತ್ತವೆ. ಆದರೆ, ಅಧ್ಯಾತ್ಮ ಸಾಧನೆಯ ನಡುವೆ ಬರುವ ಅಡ್ಡಿ–ಆತಂಕಗಳು ಹಾಗೂ ಪ್ರಲೋಭನೆಗಳು ಅನೇಕ. ಇವುಗಳಿಂದ ವಿಚಲಿತನಾಗದೆ ಏಕಾಗ್ರತೆಯಿಂದ ಸಾಧನೆಯ ಹಾದಿಯಲ್ಲಿ ಮುನ್ನಡೆಯಬೇಕಾಗುತ್ತದೆ. ಧ್ಯಾನ ಮಾಡಲು ಅಗತ್ಯವಾದ ಅಂಶಗಳ ಬಗ್ಗೆ ಶ್ರೀಮದ್ಭಗವದ್ಗೀತೆಯ 'ಧ್ಯಾನಯೋಗ'ದಲ್ಲಿ (ಆತ್ಮಸಂಯಮ ಯೋಗ) ವಿವರಿಸಲಾಗಿದೆ. ಇದು ಸಾಧಕರಿಗೆ ಕೈದೀವಿಗೆಯಿದ್ದಂತೆಯೇ ಸರಿ.

ಧ್ಯಾನದ ಮಹತ್ವವನ್ನು ವಿವರಿಸುವ ಸುಭಾಷಿತ ಹೀಗಿದೆ:

ಬದ್ಧಶ್ಚೇಚ್ಚಿತ್ತ ಮಾತಂಗಃ ಸ್ಮೃತಿರಜ್ಜ್ವಾ ಸಮಂತತಃ ।
ಭಯಮಸ್ತಂಗತಂ ಸರ್ವಂ ಕೃತ್ಸ್ನಂ ಕಲ್ಯಾಣಮಾಗತಮ್ ॥

**ಧ್ಯಾನವೆಂಬ ಹಗ್ಗದಿಂದ ಮನಸ್ಸೆಂಬ ಆನೆಯನ್ನು ಎಲ್ಲ ಕಡೆಯಿಂದಲೂ ಕಟ್ಟಿಹಾಕಿದರೆ ಎಲ್ಲಾ ಭಯಗಳೂ ದೂರವಾಗುವುವು. ಎಲ್ಲ ವಿಧದ ಮಂಗಳಗಳೂ ಉಂಟಾಗುವುವು.**

ಧ್ಯಾನದಿಂದಲೇ ಸಂಯಮವನ್ನೂ ಸಾಧಿಸಬಹುದೆಂಬ ಅಂಶವು ಇಲ್ಲಿ ಪ್ರತಿಪಾದಿತವಾಗಿದೆ.

ಆತ್ಮಸಾಕ್ಷಾತ್ಕಾರದ ಹಾದಿಯಲ್ಲಿ ಗುರುವಿನ ಪಾತ್ರ ಮಹತ್ವದ್ದಾಗಿರುತ್ತದೆ. 'ಗುರು'ವೆಂದರೆ, "ಅಂಧಕಾರವನ್ನು ಹೋಗಲಾಡಿಸಿ ಬೆಳಕನ್ನು ತೋರಿಸುವವನು" ಎಂದರ್ಥ. ಇಂಥ ಗುರುಗಳು ಲಭಿಸಬೇಕಾದರೆ ತುಂಬಾ ಪುಣ್ಯ ಮಾಡಿರಬೇಕು. ಒಮ್ಮೆ ಇಂಥ ಗುರುವಿನ ಮಾರ್ಗದರ್ಶನ ನಮಗೆ ಲಭಿಸಿದರೆ ಅವರ ಕೃಪೆ, ಮಾರ್ಗದರ್ಶನ ಹಾಗೂ ಅನುಭವದ ಹಿತವಚನಗಳ ಸಹಾಯದಿಂದ ಆತ್ಮಸಾಕ್ಷಾತ್ಕಾರದ ಹಾದಿಯಲ್ಲಿ ಸುಲಭವಾಗಿ ಮುನ್ನಡೆಯಬಹುದು. ಸದ್ಗುರುವು ಸಾಧಕನಾದ ತನ್ನ ಶಿಷ್ಯನ ಜನ್ಮಜನ್ಮಾಂತರಗಳಿಂದ ಬಂದ ಕರ್ಮವೆಂಬ ಕಟ್ಟಿಗೆಯನ್ನು ಆತ್ಮಜ್ಞಾನವೆಂಬ ಅಗ್ನಿಯಿಂದ ಸುಟ್ಟು ಭಸ್ಮ

ಮಾಡಬಲ್ಲನು. ಜೀವಾತ್ಮ ಹಾಗೂ ಪರಮಾತ್ಮರ ಒಂದಾಗುವಿಕೆಯೇ ಆತ್ಮಸಾಕ್ಷಾತ್ಕಾರವೆನಿಸಿದೆ. ಜೀವಾತ್ಮವು ಈ ಲೌಕಿಕ ಪ್ರಪಂಚದ ಅನೇಕ ಅನುಭವಗಳನ್ನು ಪಡೆದುಕೊಂಡು ವಿಶ್ವಾತ್ಮದೆಡೆಗೆ ಸಾಗಿ ಕೊನೆಗೆ ಅದರಲ್ಲಿಯೇ ಐಕ್ಯವಾಗುವುದು. ಪ್ರತಿಯೊಬ್ಬರೂ ಆ ಪರಬ್ರಹ್ಮ ವಸ್ತುವಿನ ಅಂಶಗಳು. ಉರಿಯುತ್ತಿರುವ ಬೆಂಕಿಯಿಂದ ಹೇಗೆ ಅದರ ಸಹಸ್ರಾರು ಕಿಡಿಗಳು ಹುಟ್ಟುತ್ತವೆಯೋ, ಹಾಗೆಯೇ ಅಕ್ಷರನಾದ ಪರಬ್ರಹ್ಮನಿಂದ ಬಗೆಬಗೆಯ ಜೀವಿಗಳು ಜನ್ಮ ತಾಳಿ ಅವನಲ್ಲಿಯೇ ವಿಲೀನಗೊಳ್ಳುತ್ತವೆ ಎಂದು ಮುಂಡಕೋಪನಿಷತ್ (೨-೧-೧) ಬೋಧಿಸುತ್ತದೆ. ಆದರೆ ನಮ್ಮ ಈ ದಿವ್ಯ ಸ್ವರೂಪದ ಅರಿವು ನಮಗಿಲ್ಲ. ನಮ್ಮ ನೈಜ ಸ್ವರೂಪವನ್ನು ಜ್ಞಾಪಿಸಿಕೊಡುವ ಕಾರ್ಯವನ್ನು ಮಾಡುವವರೇ ಗುರುಗಳು. ಅಂಥ ಗುರುವಿನ ಮಹಿಮೆಯನ್ನು ಎಷ್ಟು ವರ್ಣಿಸಿದರೂ ಕಡಿಮೆಯೇ. ಆತ್ಮಸಾಕ್ಷಾತ್ಕಾರದಲ್ಲಿ ಗುರುವಿನ ಪ್ರಾಮುಖ್ಯತೆಯನ್ನು ಕಠೋಪನಿಷತ್ತಿನ ಈ ಮಂತ್ರವು ತಿಳಿಸುತ್ತದೆ:

ಶ್ರವಣಾಯಾಪಿ ಬಹುಭಿರ್ಯೋ ನ ಲಭ್ಯಃ
ಶೃಣ್ವಂತೋಽಪಿ ಬಹವೋ ಯಂ ನ ವಿದ್ಯುಃ ।
ಆಶ್ಚರ್ಯೋ ವಕ್ತಾ ಕುಶಲೋಽಸ್ಯ ಲಬ್ಧಾ
ಆಶ್ಚರ್ಯೋ ಜ್ಞಾತಾ ಕುಶಲಾನುಶಿಷ್ಟಃ ॥ (೧.೨. ೭)

**"ಆತ್ಮನು ಅನೇಕರಿಗೆ ಕೇಳಲಿಕ್ಕೂ ಸಿಗಲಾರನು. ಕೇಳಲು ಅವಕಾಶ ಸಿಕ್ಕರೂ ಅವರಲ್ಲೂ ಬಹುಮಂದಿ ಅವನನ್ನು ಅರಿಯರು. ಹೀಗಾಗಿ, ಅವನನ್ನು ಕುರಿತು ಹೇಳುವವನು ಅಪರೂಪವೇ ಸರಿ. ಹಾಗೆಯೇ ಕೇಳಲಿಕ್ಕೆ ಅವಕಾಶ ಸಿಕ್ಕವನೂ ನಿಪುಣನೇ ಸರಿ. ಇದೇ ರೀತಿ, ಅದನ್ನು ತಿಳಿದುಕೊಂಡವನೂ ಅದ್ಭುತ, ಅಂತಹವನಿಂದ ತಿಳಿಯುವವನೂ ಕುಶಲನೇ ಸರಿ."**

ಸಾಧಕನಿಗೆ ನಿಜವಾಗಿಯೂ ಆತ್ಮಸಾಕ್ಷಾತ್ಕಾರದ ಉತ್ಕಟವಾದ ಬಯಕೆ ಇದ್ದರೆ ಯೋಗ್ಯನಾದ ಗುರುವು ಅವನಿಗೆ ತನ್ನೆಲ್ಲಾ ಜ್ಞಾನಸಂಪತ್ತನ್ನೂ ಧಾರೆಯೆರೆಯುತ್ತಾನೆ. ತನ್ನ ಶಿಷ್ಯನ ಅಭ್ಯುದಯಕ್ಕಾಗಿ ಎಲ್ಲಾ ರೀತಿಯಿಂದಲೂ ನಿರಂತರವೂ ಪ್ರಯತ್ನಿಸುತ್ತಿರುತ್ತಾನೆ. ಇಂಥ ಗುರು-ಶಿಷ್ಯರ ಪರಂಪರೆಯನ್ನೇ ನಮ್ಮ ಸಂಸ್ಕೃತಿಯಲ್ಲಿ ಗುರುತಿಸಬಹುದು. ಯಮನ ಶಿಷ್ಯನಾಗಿ ಆತ್ಮತತ್ತ್ವವನ್ನು ತಿಳಿದುಕೊಂಡ ನಚಿಕೇತ, ಶ್ರೀಕೃಷ್ಣಪರಮಾತ್ಮನಿಂದ ಗೀತೋಪದೇಶ ಪಡೆದ ಅರ್ಜುನ, ಶ್ರೀಗೋವಿಂದ ಭಗವತ್ಪಾದರ ಶಿಷ್ಯರಾಗಿದ್ದ ಆದಿಗುರು ಶ್ರೀಶಂಕರರು, ಶ್ರೀರಾಮಕೃಷ್ಣ ಪರಮಹಂಸರ ಪ್ರಿಯ ಶಿಷ್ಯರಾಗಿದ್ದ ಸ್ವಾಮಿ ವಿವೇಕಾನಂದರು ಮೊದಲಾದ ಅನೇಕ ಸಾಧಕರು ತಮ್ಮ ಗುರುಗಳ ಕೃಪಾಕಟಾಕ್ಷಕ್ಕೆ ಪಾತ್ರರಾಗಿ, ಆಧ್ಯಾತ್ಮಿಕವಾಗಿ ತುಂಬ ಎತ್ತರದ ಸಾಧನೆಯನ್ನು ಮಾಡಿದರು.

ಅನೇಕ **ವೇಳೆ** ನಮಗೆ ಸರಿಯಾದ ಗುರು ಲಭಿಸದಿರಬಹುದು. ಆಗ ನಮ್ಮ ಶುದ್ಧ ಅಂತರಂಗವೇ ನಮಗೆ ಗುರುವಾಗಬಲ್ಲದು. ಈ ವಿಷಯವಾಗಿ ಸ್ವಾಮಿ ಬ್ರಹ್ಮಾನಂದರು ಹೀಗೆ ಹೇಳಿದ್ದಾರೆ: "ಪ್ರಾರ್ಥನೆ, ಧ್ಯಾನಗಳ ಮೂಲಕ ಮನಸ್ಸು ಪರಿಶುದ್ಧವಾದಾಗ ಅದೇ ನಿಮಗೆ ಒಳಗಿನಿಂದ ಮಾರ್ಗದರ್ಶನ ನೀಡುತ್ತದೆ. ನಿಮ್ಮ ದೈನಂದಿನ ಕಾರ್ಯಗಳಲ್ಲಿಯೂ ಈ ಆಂತರಿಕ ಗುರು ಮಾರ್ಗದರ್ಶಕವಾಗುತ್ತದೆ ಮತ್ತು ನೀವು ಗುರಿ ಸೇರುವವರೆಗೂ ಅದು ನಿಮಗೆ ಸಹಾಯ ಮಾಡುತ್ತದೆ." ಭಗವಾನ್ ಬುದ್ಧನೂ ಸಹ **ಆತ್ಮದೀಪೋ ಭವ** (ನಿನಗೆ ನೀನೇ ಬೆಳಕಾಗು) ಎಂದು ಅಂತ್ಯಕಾಲದಲ್ಲಿ ತನ್ನ ಪ್ರಿಯಶಿಷ್ಯನಾದ ಆನಂದನಿಗೆ ಉಪದೇಶಿಸಿದನು.

ಆತ್ಮಸಾಕ್ಷಾತ್ಕಾರಕ್ಕಾಗಿ ನಮ್ಮಿಂದ ಏನೆಲ್ಲ ಮಾಡಲು ಸಾಧ್ಯವೋ ಅಷ್ಟೂ ಪ್ರಯತ್ನಗಳನ್ನು ಮಾಡಿ, ಕೊನೆಗೆ ಆ ಸರ್ವಾಂತರ್ಯಾಮಿಯ ಕೃಪೆಗೆ ಕಾಯಬೇಕು. ಅವನ ಕೃಪೆ ನಮಗೆ ಒದಗಿ ಬಂದಾಗ ಅವನು ತನ್ನ ನೈಜ ಸ್ವರೂಪವನ್ನು ನಮಗೆ ತೋರುತ್ತಾನೆ. ಹೀಗೆ, ಅವನೇ ಮನಸ್ಸು ಮಾಡಿದಾಗ ಅವನ ಯಥಾರ್ಥ ಸ್ಥಿತಿಯನ್ನು ತಿಳಿದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ನಾವು ಮಾಡುವ ಸಾಧನೆಗಳೆಲ್ಲಾ ಉರುವಲನ್ನು ಸಂಗ್ರಹಿಸಿದಂತೆ. ಅವನ ಕೃಪೆ ಎಂಬ ಉರಿ ತಾಕಿದರೆ ಮಾತ್ರ ಇವುಗಳೆಲ್ಲಾ ಹತ್ತಿಕೊಳ್ಳುತ್ತವೆ. ಸಾಧಕನಿಗೆ ತನಗೆ ಜ್ಞಾನಸಾಧನೆಯೊಂದೇ ಬೇಕು, ಅದು ಇಲ್ಲದೇ ತನ್ನ ಬಾಳು ಶೂನ್ಯ ಎಂಬ ಉತ್ಕಟತೆ ಸದಾ ಇರಬೇಕು; ಅದಿಲ್ಲದೇ ಆತ್ಮನು ಒಲಿಯುವುದಿಲ್ಲ. ಶ್ರೀರಾಮಕೃಷ್ಣ ಪರಮಹಂಸರು ಈ ಉತ್ಕಟತೆಯನ್ನು ವಿಶದಪಡಿಸಲು ಒಂದು ನಿದರ್ಶನ ಕೊಟ್ಟಿದ್ದಾರೆ: ಶಿಷ್ಯನೊಬ್ಬ ತನ್ನ ಗುರುವಿನ ಬಳಿ, ತನಗೆ ದೇವರ ವಿಷಯವನ್ನು ತಿಳಿಯಪಡಿಸಿ ಎಂದು ಪ್ರತಿದಿನ ಪೀಡಿಸುತ್ತಿದ್ದನು. ಒಂದು ದಿನ ಇವನ ಕಾಟ ಅತಿಯಾದಾಗ, ಇವನನ್ನು ತನ್ನ ಜೊತೆಯಲ್ಲಿ ನದಿಗೆ ಕರೆದುಕೊಂಡು ಹೋದರು. ಅವನಿಗೆ ಮೊದಲು ನೀನು ಸ್ನಾನ ಮಾಡು, ಆಮೇಲೆ ನಾನು ಸ್ನಾನ ಮಾಡುತ್ತೇನೆ ಎಂದರು. ಅವನು ನೀರಿನಲ್ಲಿ ಮುಳುಗಿದ ತಕ್ಷಣ ಗುರುಗಳು ಅವನನ್ನು ಹಾಗೆಯೇ ಕೆಲವು ಕಾಲ ನೀರಿನಲ್ಲಿ ಒತ್ತಿ ಹಿಡಿದಿದ್ದರು. ಆಗ ಅವನು ಉಸಿರಾಡಲು ಕಷ್ಟವಾಗಿ ವಿಲವಿಲನೆ ಒದ್ದಾಡುತ್ತಿದ್ದನು. ಸ್ವಲ್ಪ ಹೊತ್ತಾದ ಮೇಲೆ ಅವರು ತಮ್ಮ ಹಿಡಿತವನ್ನು ಸಡಿಲಗೊಳಿಸಿ, ಅವನನ್ನು ಹೊರಗೆಳೆದರು. ಅವನು ಮೇಲೆ ಬಂದು ನೆಮ್ಮದಿಯಾಗಿ ಜೋರಾಗಿ ಉಸಿರೆಳೆದುಕೊಂಡನು. ಆಗ ಗುರುಗಳು, ನೀನು ನೀರಿನಲ್ಲಿ ಮುಳುಗಿದ್ದಾಗ ಹೇಗೆನಿಸಿತು ಎಂದು ಕೇಳಿದರು. ಅವನು ಅದಕ್ಕೆ, ಒಂದು ಸ್ವಲ್ಪ ಉಸಿರು ಸಿಕ್ಕಿದರೂ ಸಾಕು ಎಂದು ಚಡಪಡಿಸುತ್ತಿದ್ದೆ

ಎಂದು ಉತ್ತರಿಸಿದನು. ಆಗ ಗುರುಗಳು 'ನಿನಗೆ ದೇವರು ಬೇಕೆಂದು ಇಷ್ಟೇ ತೀವ್ರವಾಗಿ ಬಯಸಿದರೆ ಅವನು ಖಂಡಿತ ಸಿಕ್ಕುವನು. ಪರಮಾತ್ಮನ ವಿಷಯದಲ್ಲಿ ಬೇಕಾಬಿಟ್ಟಿ ಕೇಳಿದರೆ ಸಿಕ್ಕುವುದಿಲ್ಲ. ನೀನೇ ಬರಬೇಕು. ನಿನ್ನ ಅಷ್ಟೈಶ್ವರ್ಯಗಳಲ್ಲ. ನೀನಿಲ್ಲದಿದ್ದರೆ ನನ್ನ ಬಾಳು ಶೂನ್ಯ ಎಂಬ ತೀವ್ರತೆ ನಮ್ಮ ವೇದಿಕೆಯಲ್ಲಿ ವ್ಯಕ್ತವಾದಾಗ ಮಾತ್ರ ಅವನು ಬರುತ್ತಾನೆ" ಎಂದು ತಿಳಿಸಿದರು (**ಸ್ವಾಮಿ ಸೋಮನಾಥಾನಂದರ 'ಉಪನಿಷತ್ ಭಾವಧಾರೆ'**). ಹೀಗೆ ನಮ್ಮ ಸಾಧನೆಯ ವಿನಯದಿಂದ ಆತ್ಮನನ್ನು ಸಾಕ್ಷಾತ್ಕರಿಸಿಕೊಳ್ಳುವ ಮಾರ್ಗವು ಸುಗಮವಾಗುತ್ತದೆ.

ಸಾಧನೆಯ ಹಾದಿಯಲ್ಲಿ ಅನೇಕ ವಿಘ್ನಗಳು ಬಂದೆರಗಬಹುದು. ಆದರೆ ಸಾಧಕನು ಅವುಗಳಿಂದಾಗಿ ವಿಚಲಿತನಾಗದೇ ಮುಂದುವರೆಯಬೇಕು. ಅವನು ತನ್ನ ಗುರಿಗೆ ನಿಷ್ಠನಾಗಿದ್ದರೆ ಭಗವತ್ಕೃಪೆ ತಾನಾಗಿಯೇ ಲಭಿಸಿ, ಆತ್ಮಸಾಕ್ಷಾತ್ಕಾರ ಸುಲಭವಾಗಿ ಪರಿಣಮಿಸುತ್ತದೆ. ಆದರೆ ಇದಕ್ಕಾಗಿ ತಾಳ್ಮೆ ಮತ್ತು ಪರಿಶ್ರಮ ಅತ್ಯಗತ್ಯ. ಹಾಗೂ ಮತ್ತೊಂದು ವಿಷಯವೆಂದರೆ, ದಾರಿಯಲ್ಲಿ ನಡೆಯುವವರಿಗೆ ಹಾನಿಯೆಂಬುದೇ ಇಲ್ಲ. ಅಲ್ಪ ಸ್ವಲ್ಪ ಸಾಧನೆಯನ್ನು ಮಾಡಿದವನಿಗೂ ದುರ್ಗತಿ ಪ್ರಾಪ್ತವಾಗುವುದಿಲ್ಲವೆಂದು ಭಗವದ್ಗೀತೆಯಲ್ಲಿ ಸ್ವತಃ ಭಗವಂತನೇ ಹೇಳಿದ್ದಾನೆ:

**ಪಾರ್ಥ ನೈವೇಹ ನಾಮುತ್ರ ವಿನಾಶಸ್ತಸ್ಯ ವಿದ್ಯತೇ ।**
**ನ ಹಿ ಕಲ್ಯಾಣಕೃತ್ ಕಶ್ಚಿದ್ದುರ್ಗತಿಂ ತಾತ ಗಚ್ಛತಿ ॥** (೬-೪೦)

**ಎಲೈ ಅರ್ಜುನನೇ, ಆ ಪುರುಷನು (ಭಗವತ್ಪ್ರಾಪ್ತಿಯ ಮಾರ್ಗವನ್ನು ಮೋಹಿತನಾಗಿ ಸರಿಯಾಗಿ ಅನುಸರಿಸಿದ ವ್ಯಕ್ತಿ) ಈ ಲೋಕದಲ್ಲಿಯಾಗಲಿ ಪರಲೋಕದಲ್ಲಿಯಾಗಲಿ ವಿನಾಶವನ್ನು ಹೊಂದುವುದಿಲ್ಲ. ಹೇ ಪ್ರೀತಿಪಾತ್ರನೇ! ಆತ್ಮೋದ್ಧಾರಕ್ಕಾಗಿ, ಅಂದರೆ ಆತ್ಮಸಾಕ್ಷಾತ್ಕಾರಕ್ಕಾಗಿ ಕರ್ಮ ಮಾಡುವ ಯಾವ ಮನುಷ್ಯನೂ ದುರ್ಗತಿಯನ್ನು ಹೊಂದುವುದಿಲ್ಲ.**

'ಒಳ್ಳೆಯದನ್ನು ಮಾಡಿದ ಯಾರಿಗೇ ಆಗಲಿ, ಕೆಟ್ಟ ಗತಿ ಆಗಲಾರದು". ವರ್ತಮಾನದಲ್ಲಿ ಒಳ್ಳೆಯ ಕರ್ಮವನ್ನು ಮಾಡುವ ವ್ಯಕ್ತಿಗೆ ಭವಿಷ್ಯದಲ್ಲಿ ಒಳ್ಳೆಯ ಫಲವೇ ಲಭಿಸುತ್ತದೆಯೇ ಹೊರತು ಎಂದೂ ಕೆಟ್ಟದಾಗುವುದಿಲ್ಲ ಎಂದು ಪರಮಾತ್ಮನು ಈ ಶ್ಲೋಕದಲ್ಲಿ ಅಭಯ ನೀಡಿದ್ದಾನೆ.

ಹೀಗೆ ಆತ್ಮಸಾಕ್ಷಾತ್ಕರದ ಮಾರ್ಗವು ಅತ್ಯಂತ ಕಠಿಣವಾಗಿದ್ದರೂ ಅತ್ಯಂತ ಶ್ರೇಯಸ್ಕರವಾದುದು. ಅದರಲ್ಲಿಯೆ ಮುಂದುವರೆದ ಹಾಗೆಲ್ಲ ನಮ್ಮ ಆನಂದ ಅಧಿಕವಾಗುತ್ತ ಹೋಗುತ್ತದೆ. ಇದರ ಮಹತ್ವವನ್ನು ಅರಿತು ಪ್ರತಿಯೊಬ್ಬರೂ ಸಾಧನೆಯಲ್ಲಿ ತೊಡಗಲಿ; ಆತ್ಮಸಾಕ್ಷಾತ್ಕಾರದ ಹಾದಿಯಲ್ಲಿ, ಎಲ್ಲ ಸಾಧಕರಿಗೂ ಯಶಸ್ಸು ದೊರೆಯಲಿ ಎಂದು ಪರಮಗುರು ಸಚ್ಚಿದಾನಂದಮೂರ್ತಿಯನ್ನು ಪ್ರಾರ್ಥಿಸೋಣ.

## ಪ್ರಹಸನ ಪ್ರಸಂಗ

• ಚಿತ್ರಪ್ರದರ್ಶನವೊಂದರಲ್ಲಿ ಪ್ರೇಕ್ಷಕರು ತಮ್ಮ ಅಭಿಪ್ರಾಯಗಳನ್ನು ಬರೆಯಲು ಒಂದು ಸುಂದರವಾದ ಪುಸ್ತಕ ಹಾಗೂ ಲೇಖನಿಯನ್ನು ಇಡಲಾಗಿತ್ತು. ಅಲ್ಲಿ ಒಂದು ಚೀಟಿಯಲ್ಲಿ ಹೀಗೆ ಬರೆದಿತ್ತು: "ನೀವು ಒಳಗೆ ಬಂದು ಚಿತ್ರಗಳನ್ನು ನೋಡಿದ್ದಕ್ಕೆ ಕಾರಣ......?" ಮಹಿಳೆಯೊಬ್ಬಳು ಹೀಗೆ ಬರೆದಿದ್ದಳು: **"ಹೊರಗೆ ಭಾರಿ ಮಳೆ ಬೀಳುತ್ತಿತ್ತು!"**

• ಬೋಳುತಲೆಯ ವ್ಯಕ್ತಿಯೊಬ್ಬ ರಸ್ತೆಯಲ್ಲಿ ನಡೆದು ಹೋಗುತ್ತಿದ್ದಾಗ ತುಂಟ ಹುಡುಗರು ಗೇಲಿ ಮಾಡಲಾರಂಭಿಸಿದರು. "ನೋಡೋ ಹಗಲಿನಲ್ಲೇ ಚಂದ್ರ ಕಾಣಿಸ್ತಾ ಇದಾನೆ!" ಆ ವ್ಯಕ್ತಿ ತನ್ನ ಕೈಯಲ್ಲಿದ್ದ ಕೋಲಿನಿಂದ ಅವರಿಗೆ ಎರಡು ಬಿಗಿದು ಹೇಳಿದ, **"ಬರೀ ಚಂದ್ರ ಏಕೆ, ನಕ್ಷತ್ರಗಳನ್ನೂ ಎಣಿಸುವಿರಂತೆ ಬನ್ನಿ!"**

• ಅತಿಥಿ: ನಿಮ್ಮ ನಾಯಿ ನನ್ನ ತಟ್ಟೆಯನ್ನೇ ದುರುಗುಟ್ಟಿ ನೋಡುತ್ತಿದೆಯಲ್ಲ! ಏಕೆ?"

ಮನೆಯ ಮಗು: **ಅದು ತನ್ನಂತೆ ಇರುವವರು ತಿನ್ನುವ ತಟ್ಟೆಯನ್ನು ಚೆನ್ನಾಗಿ ಗುರುತಿಸಬಲ್ಲದು, ಅದಕ್ಕೇ!!**

• **ಮೀನು** ಹಿಡಿಯುತ್ತಿದ್ದ ವ್ಯಕ್ತಿಯು ಬಹಳ ಹೊತ್ತು ತನ್ನ ದೋಣಿಯಲ್ಲಿ ಕುಳಿತಿದ್ದ. ಕೆರೆಯ ಮಧ್ಯಭಾಗದಲ್ಲಿ ಗಾಳ ಹಾಕಿದ್ದರೂ ಒಂದೂ ಮೀನು ಸಿಗಲಿಲ್ಲ. ಬೇಸತ್ತು ದೇವರಲ್ಲಿ ಬೇಡಿಕೊಂಡ, "ದೇವರೆ, ದಯವಿಟ್ಟು ಒಂದಾದರೂ ದೊಡ್ಡ ಮೀನನ್ನು ನನಗಾಗಿ ಕಳಿಸು." ಇದ್ದಕ್ಕಿದ್ದಂತೆ ದೋಣಿ ಅಲ್ಲಾಡಲಾರಂಭಿಸಿತು. ಕೋರೆಹಲ್ಲುಗಳನ್ನು ಪ್ರದರ್ಶಿಸುತ್ತ ಒಂದು ದೊಡ್ಡ ಶಾರ್ಕ್ ಮೀನು ತಲೆಯೆತ್ತಿ ಹೇಳಿತು, **"ಕರೆದೆಯಾ?"**

• **ಮತ್ತೆ** ಮತ್ತೆ ನಿಲ್ಲಿಸಲು ಹೇಳಿದರೂ ತನ್ನ ಅಸಂಬದ್ಧ ಭಾಷಣವನ್ನು ಮುಗಿಸದ ಪುಢಾರಿಯತ್ತ ಕೋಪಗೊಂಡ ಸಭಾಪತಿ, ಕೈಯಲ್ಲಿದ್ದ ಮರದ ಸುತ್ತಿಗೆಯನ್ನೇ ಬಿಸಾಡಿದ. ಅದು ಗುರಿ ತಪ್ಪಿ ಪಕ್ಕದಲ್ಲಿ ಕುಳಿತಿದ್ದ ಮತ್ತೊಬ್ಬ ಸದಸ್ಯರ ತಲೆಗೆ ತಗುಲಿ, ಆತ ಕೆಳಗೆ ಬಿದ್ದ. ಮೂರ್ಛೆತಪ್ಪುವ ಸ್ಥಿತಿಯಲ್ಲಿ ಇದ್ದರೂ ಅವನು ಕೂಗಿ ಹೇಳುತ್ತಿದ್ದ, **"ನನಗೆ ಇನ್ನೂ ಹೊಡೆಯಿರಿ. ಬೇಕಾದರೆ ಸಾಯಿಸಿ. ನನಗಿನ್ನೂ ಅವನ ಭಾಷಣ ಕೇಳಿಸುತ್ತಲೇ ಇದೆ!"**